## ಕಳೆದ ಸಂಚಿಕೆಯಲ್ಲಿ



ಅಮೆರಿಕದಲ್ಲಿ ಜೀವನ ನೆಲೆಗೊಳ್ಳುತ್ತಿದೆ ಎನ್ನುವಷ್ಟರಲ್ಲಿ ಮಾರ್ಕೋ ಹೊಸದೊಂದು ಬಾಂಬ್ ಸಿಡಿಸಿದ್ದ; ಡೆನ್ಮಾರ್ಕ್‌ಗೆ ಮರಳುತ್ತಿದ್ದೇವೆ ಎನ್ನುವ ಸುದ್ದಿಯ ಮೂಲಕ. ಜೋಶುಆನಿಂದ ದೂರವಾಗಿ ಡೆನ್ಮಾರ್ಕ್‌ಗೆ ಹೋಗುವುದು ಇಷ್ಟವಿಲ್ಲದಿದ್ದರೂ ನ್ಯಾನ್ಸಿಗೆ ಗಂಡನನ್ನು ಹಿಂಬಾಲಿಸುವುದರ ಹೊರತು ಬೇರೆ ದಾರಿಯಿರಲಿಲ್ಲ. ಡೆನ್ಮಾರ್ಕ್‌ನಲ್ಲಿ ತಾನಿಷ್ಟಪಡುವ ಶಿಕ್ಷಕಿಯ ಕೆಲಸ ದೊರೆಯಲಿಲ್ಲ. ಬೇರೆ ಕೆಲಸ ಮಾಡಲು ಪ್ರಯತ್ನಿಸಿದರೂ ಯಾವ ಕಂಪನಿಯೂ ನೌಕರಿ ಕೊಡಲು ಮುಂದಾಗಲಿಲ್ಲ. ಸಂದಿಗ್ಧದಲ್ಲಿ ತೊಳಲಾಡುತ್ತಿದ್ದ ನ್ಯಾನ್ಸಿಗೆ ಮಾರ್ಕೋ ಹಿತವಾದ ಸುದ್ದಿ ತಂದ. ಎರಡು ವರ್ಷಗಳ ಕಾಲ ಕಂಪನಿ ಅವನನ್ನು ಬೆಂಗಳೂರಿಗೆ ಕಳಿಸಲು ನಿರ್ಧರಿಸಿತ್ತು. ತವರುದೇಶದ ಬೆಂಗಳೂರಿನ ವಾಸ್ತವ್ಯ ನ್ಯಾನ್ಸಿಗೆ ಹೊಸ ಚೈತನ್ಯ ತಂದುಕೊಟ್ಟಿತು. ನೆರೆಹೊರೆಯವರ ಪ್ರೀತಿ ಹಾಗೂ ಜೀವನವನ್ನು ಹಗುರಗೊಳಿಸುತ್ತಿದ್ದ ಕೆಲಸಕ್ಕೆ ದೊರೆಯುತ್ತಿದ್ದ ಕುಶಲಕರ್ಮಿಗಳಿಂದಾಗಿ ಬದುಕು ಸುಂದರವಾಗಿ ಕಾಣಿಸಿತು.

'ನ್ಯಾನ್ಸಿ, ಇದು ನಿನ್ನ ವಿಚಾರ ಮಾತ್ರವಲ್ಲ, ಎಲ್ಲರ ಪರಿಸ್ಥಿತಿ ಸಹ ಇದೇ ಆಗಿದೆ. ಒಮ್ಮೆ ಒಂದು ಕಡೆ ನೆಲೆಸಿದಾಗ, ಅಲ್ಲಿಂದ ಮರಳಿ ಬರುವುದು ಸುಲಭವಲ್ಲ' ಪಾಲ್ ಹೇಳುತ್ತಿದ್ದ, 'ನಾನೂ ಸಹ ಅದೆಷ್ಟೋ ಬಾರಿ ಸ್ಕಾಟ್ಲೆಂಡಿಗೆ ಮರಳಿ ಹೋಗಲು ಯೋಚಿಸಿದೆ, ಆದರೆ ಹೋಗದಾದೆ. ಇಲ್ಲಿಯೂ ಇರದಾದೆ, ಅಲ್ಲಿಗೂ ಹೋಗದಾದೆ...'

ಪಾಲ್, ಕೆಲವೊಂದು ಅದೃಷ್ಟವಾದರೆ, ಕೆಲವೊಂದು ಪರಿಸ್ಥಿತಿಗಳೂ ಕಾರಣವಾಗುತ್ತವೆ... ಎಲ್ಲಿ ಅನ್ನದ ಋಣ ಬರೆದಿರುತ್ತೋ...

ಆರಂಭದ ಜಗಳದ ಅಲ್ಲಿಗೇ ಮುಗಿಯಿತು. ನಾವು ಬೆಂಗಳೂರಿನಲ್ಲಿ ನೆಮ್ಮದಿಯಿಂದ ನೆಲೆಸಿದೆವು, ಕೇರಳದ ಪ್ರವಾಸವನ್ನು ಸಹ ಮಾಡಿದೆವು. ಮೊದಲು ಮಲಪ್ಪುರಮ್‌ಗೆ ಹೋದೆವು. ನಾನು ಅಮೆರಿಕದಲ್ಲಿದ್ದಾಗ ಪಾಪುನ್ ನಿಧನರಾದ ಸುದ್ದಿ ಸಿಕ್ಕಿತ್ತು. ಪರಿವಾರದಲ್ಲಿ ತಂದೆ–ತಾಯಿಯ ಪೀಳಿಗೆಯವರು ಒಬ್ಬೊಬ್ಬರಂತೆ ನಿಧನರಾಗಿದ್ದರು. ಆ ಪೀಳಿಗೆ ಸುಮಾರಾಗಿ ಲುಪ್ತವಾಗಿತ್ತು. ಅಮ್ಮನ ಕಡೆಯಿಂದ ಅವರ ತಂಗಿ, ಕುಂಜಮ್ಮಾ ಮತ್ತು ತಂದೆಯವರ ಕಡೆಯಿಂದ ಅವರ ತಮ್ಮನ ಹೆಂಡತಿ ಚೆರಿಯಾಮ್ಮಾ ಮಾತ್ರ ಬದುಕಿದ್ದರು.

ಬೆಂಗಳೂರಿನಿಂದ ಇಬ್ಬರಿಗೂ ಕಾಂಚೀವರಂ ಸೀರೆಯನ್ನು ಖರೀದಿಸಿದೆ. ಉಳಿದುಕೊಳ್ಳಲು ಮಲಪ್ಪುರಮ್‌ನಲ್ಲಿ ಹೋಟೆಲ್ ಬುಕ್ ಮಾಡಿದೆ. ಅಲ್ಲಿ ನಾನು ನನ್ನ ಸಂಬಂಧಿಕರ ಮನೆಯಲ್ಲಿ ಉಳಿಯಬಹುದಿತ್ತು, ಆದರೆ ಅವರಿಗೆ ಭಾರವಾದರೆ? ಅಲ್ಲದೆ ಮಾರ್ಕೋಗೆ ನನ್ನ ಸಂಬಂಧಿಕರ ಮನೆಯಲ್ಲಿರುವುದು ಸರಿಬರುವುದೋ, ಇಲ್ಲವೋ; ಅವರಿಗೆ ಮಾರ್ಕೋ ಹೊಂದಿಕೆಯಾಗುತ್ತಾನೋ, ಇಲ್ಲವೋ ಎಂದೆಲ್ಲಾ ಯೋಚಿಸಿ ನಾನು ಹೋಟೆಲ್ ಬುಕ್ ಮಾಡಿದೆ.

ನಾವು ಬೆಂಗಳೂರಿನಿಂದ ಮಲಪ್ಪುರಮ್‌ನ ಸಮೀಪದ ವಿಮಾನ ಪ್ರದೇಶ ಕ್ಯಾಲಿಕಟ್‌ಗೆ ಫ್ಲೈಟ್ ಹಿಡಿದೆವು. ವಿಮಾನ ನಿಲ್ದಾಣದಿಂದ ಮಲಪ್ಪುರಮ್‌ಗೆ ಹೋಗಲು ನಲ್ವತ್ತು ನಿಮಿಷಗಳು ಹಿಡಿದವು. ಮರುದಿನ ಟ್ಯಾಕ್ಸಿ ಹಿಡಿದಾಗ, ಯಾರ ಮನೆಗೆ ಮೊದಲು ಹೋಗುವುದು ಎಂಬ ಪ್ರಶ್ನೆ ಎದುರಾಯಿತು. ಕುಂಜಮ್ಮಾರ ಮನೆಗೆ ಹೋಗುವುದೇ? ಕುಂಜಮ್ಮಾರನ್ನು ಭೇಟಿಯಾಗುವುದೇ ಮಲಪ್ಪುರಮ್‌ಗ ಬಂದ ಮುಖ್ಯ ಉದ್ದೇಶವಾಗಿತ್ತು. ಟ್ಯಾಕ್ಸಿ ಡ್ರೈವರ್‌ಗೆ ಅರೀಕೋಡ್ ಕಡೆಗೆ ಹೋಗಲು ಹೇಳಿದೆ.

ಅಪ್ಪನ ನಿಧನದ ನಂತರ ಮೊದಲ ಬಾರಿಗೆ ಇಲ್ಲಿ, ನನ್ನ ಹಳೆಯ ಪ್ರದೇಶಕ್ಕೆ ಮರಳಿ ಬಂದಿದ್ದೆ. ನನ್ನ ಸ್ಮೃತಿಯಲ್ಲಿ ಈ ಮೊಹಲ್ಲಾದ ಆರು ವರ್ಷಗಳ ಹಳೆಯ ಚಿತ್ರ ಇಂದೂ ಸಹ ಯಥಾ ರೀತಿಯಲ್ಲಿಯೇ ಇತ್ತು. ಈ ಪ್ರದೇಶದ ಬಗ್ಗೆ ನನ್ನ ಮೋಹ ಇನ್ನೂ ಹಿಂದಿನಂತೆಯೇ ಇತ್ತು. ಇಲ್ಲಿಯ ಆಟ–ಪಾಠ, ಇಲ್ಲಿಯ ಜನ, ಬೆಟ್ಟ–ಗುಡ್ಡಗಳು, ಗಲ್ಲಿ–ರಸ್ತೆಗಳು, ಅಂಗಡಿಗಳು, ಮಂದಿರ–ಮಸೀದಿ–ಚರ್ಚ್‌ಗಳು ಸ್ಮೃತಿಯಲ್ಲಿದ್ದವು. ಸಾಂಪ್ರದಾಯಿಕ ಸದ್ಭಾವನೆ ಮತ್ತು ಸೌಹಾರ್ದ ಭಾವನೆಗಳು ಈಗಲೂ ಇತ್ತು. ಗಡಿಭಾಗದಲ್ಲಿ ಹರಿಯುವ ಚಲಿಯಾರ್ ನದಿ... ಹೃದಯದ ಪ್ರತಿಯೊಂದು ಬಡಿತದಲ್ಲೂ ನದಿಯ ಚಿತ್ರವನ್ನು ಕಾಣುತ್ತಿದ್ದೆ. ಕಸಿನ್ಸ್, ಸಹೋದರ–ಸಹೋದರಿಯರು ಮತ್ತು ಸ್ನೇಹಿತರೊಂದಿಗೆ ಆಟವಾಡಿದ್ದು ಮತ್ತು ಅಡ್ಡಾಡಿದ ನೆನಪು ಮನಸ್ಸಿನಲ್ಲಿ ಇನ್ನೂ ಮನೆ ಮಾಡಿತ್ತು. ಯಾವ ಸ್ಥಳದಲ್ಲಿ ನನ್ನ ಬಾಲ್ಯದ ಕ್ಷಣಗಳನ್ನು ಹೇಗೆ ಕಳೆದೆ ಎಂದು ನೀಲ್ ಮತ್ತು ಮಾರ್ಕೋಗೆ ಹೇಳುತ್ತಾ ಹೋಗುತ್ತಿದ್ದೆ. ಅವರಿಗೆ ನನ್ನ ಶಾಲೆಯನ್ನು ತೋರಿಸಿದೆ, ಅಲ್ಲಿ ನಾನು ಪ್ರೈಮರಿ ಮತ್ತು ಸೆಕೆಂಡರಿ ತರಗತಿಗಳಲ್ಲಿ ಓದಿದ್ದೆ. ನಾನು ಬಿ.ಎಸ್ಸಿ. ಮಾಡಿದ್ದ ಕಾಲೇಜನ್ನು ತೋರಿಸಿದೆ. ಪ್ರತಿ ಭಾನುವಾರ ಮತ್ತು ಹಬ್ಬ–ಹರಿದಿನಗಳಲ್ಲಿ ನಾವು ಹೋಗುತ್ತಿದ್ದ ಚರ್ಚ್ ಅನ್ನು ತೋರಿಸಿದೆ. ಸಾಕಷ್ಟು ಬದಲಾವಣೆಯಾಗಿತ್ತು, ಕೆಲವು ಈ ಹಿಂದಿನಂತೆಯೇ ಇದ್ದವು. ಮಾರ್ಕೋ ಪ್ರತಿಕ್ರಿಯಿಸುತ್ತಿರಲಿಲ್ಲ, ಆದರೆ ನೀಲ್ ನನ್ನ ಹಿಂದಿನ ಜೀವನದ ಬಗ್ಗೆ ತಿಳಿದು ರೋಮಾಂಚನಗೊಳ್ಳುತ್ತಿದ್ದ. ನೀಲ್‌ಗೆ, ನಿನ್ನ ತಾಯಿ ಸಹ ಒಂದು ಕಾಲದಲ್ಲಿ ಮಗುವಾಗಿದ್ದಳು, ಕಿಶೋರಿಯಾಗಿದ್ದಳು; ಅವಳು ಸದಾ ನಿನ್ನ ತಾಯಿಯಾಗಿರಲಿಲ್ಲ ಎಂಬುದನ್ನು ನನ್ನ ವರ್ಣನೆ ತಿಳಿಯಪಡಿಸುತ್ತಿತ್ತು.

ನನಗೆ ಕುಂಜಮ್ಮಾರ ಮನೆಯ ಭೂಗೋಳ ವಿಶೇಷವಾಗಿ ಅರ್ಥವಾಗಲಿಲ್ಲ. ಮನೆಯ ವಿನ್ಯಾಸ ಸಂಪೂರ್ಣವಾಗಿ ಬದಲಾಗಿತ್ತು. ಅವರ ಕಾರಿನ ಗ್ಯಾರೇಜ್, ಮೆಕ್ಯಾನಿಕಲ್ ವರ್ಕ್‌ಶಾಪ್ ಆಗಿ ಬದಲಾಗಿತ್ತು. ಮೂರ್ನಾಲ್ಕು ಹಳೆ ವಾಹನಗಳು, ಕೆಲವು ಟೈರ್‌ಗಳು ಅಲ್ಲಿದ್ದವು. ಲ್ಯೂಕಾ ಮೆಕ್ಯಾನಿಕ್‌ನ ಕಪ್ಪು ಉಡುಪು ಧರಿಸಿ ಒಂದು ವಾಹನವನ್ನು ರಿಪೇರಿ ಮಾಡುತ್ತಿದ್ದ. ಕಪ್ಪು ಬಣ್ಣದಿಂದ ಲೇಪಿತನಾಗಿದ್ದ ಅವನು ನನ್ನನ್ನು ನೋಡಿ ಅಲ್ಲಿಯೇ ನಿಂತ; ಅವನು ಆಶ್ಚರ್ಯದಿಂದ ನಾವು ಟ್ಯಾಕ್ಸಿಯಿಂದ ಇಳಿಯುವುದನ್ನು ನೋಡುತ್ತಿದ್ದ. ಹಾಯ್, ಹಲೋ ಎಂದೂ ಹೇಳದಾದ. ನಾನೇ ಹೋಗಿ ಅವನನ್ನು ತಬ್ಬಿದೆ. ಲ್ಯೂಕಾ ಹೆಚ್ಚು ಓದಲು ಸಾಧ್ಯವಾಗಿರಲಿಲ್ಲ, ಹೀಗಾಗಿ ಮನೆಯಲ್ಲಿಯೇ ಗ್ಯಾರೇಜ್ ತೆರೆದಿದ್ದ.

ಅವನು ಹಿಂಜರಿಯುತ್ತಿದ್ದಾನೆ, ಅವನಿಗೆ ನನ್ನ ಬಳಿ ಮಾತನಾಡಲು ಹೆಚ್ಚು ಆಸಕ್ತಿಯಿಲ್ಲ ಎಂದು ನನಗೆ ಅನ್ನಿಸಿತು. ನಾನು ಅಲ್ಲಿ ಹೆಚ್ಚು ಹೊತ್ತು ನಿಲ್ಲದೆ, ಕುಂಜಮ್ಮಾರನ್ನು ನೋಡಲು ಒಳಗೆ ಹೋದೆ; ಆದರೆ ನಾನು ಕುಂಜಮ್ಮಾರನ್ನು ನೋಡಲು ಮನೆಯ ಹಿಂಭಾಗದಿಂದ ಹೋಗಬೇಕಾಯಿತು. ಏಕೆಂದರೆ ಅವರ ಮನೆ ಎರಡು ಭಾಗವಾಗಿತ್ತು. ಲ್ಯೂಕಾನ ಕುಟುಂಬ ಎದುರಿನ ತೆರೆದ ಭಾಗದಲ್ಲಿತ್ತು, ಕುಂಜಮ್ಮಾ ಹಿಂದಿನ ಸಂಕೀರ್ಣ ಮತ್ತು ಅಂಧಕಾರದ ಭಾಗದಲ್ಲಿ ಒಂಟಿಯಾಗಿದ್ದರು.

ಕುಂಜಮ್ಮಾರ ಪತಿ ನಾಲ್ಕೂವರೆ ವರ್ಷಗಳ ಕಾಲ ಲಕ್ವಾದಿಂದ ನರಳಿ ನಿಧನರಾಗಿದ್ದರು. ಅವರು ಕುಂಜಮ್ಮಾರಿಗೆ ಒಂದು ವಿಧದಲ್ಲಿ ಭಾರವಾಗಿದ್ದರು. ಎಲ್ಲರೂ ಅವರ ಮುಕ್ತಿಯನ್ನು ಬಯಸುತ್ತಿದ್ದರು, ಅವರು ಸತ್ತಿದ್ದರಿಂದ ಯಾರಿಗೂ ದುಃಖವಾಗಲಿಲ್ಲ. ಆದರೆ ಕುಂಜಮ್ಮಾ ಒಂಟಿಯಾದರು. ನಾನು ಅವರ ನಿಧನಕ್ಕೆ ಡೆನ್ಮಾರ್ಕ್‌ನಿಂದ ಕುಂಜಮ್ಮಾರಿಗೆ ಸಮಾಧಾನದ ಮಾತುಗಳನ್ನು ಹೇಳಲು ಫೋನ್ ಮಾಡಿದ್ದೆ, ಆಗ ಅವರು ರೋದಿಸುತ್ತಾ ಹೇಳಿದ್ದರು, 'ಅವರು ಇರುವವರೆಗೆ, ನಾನು ಬದುಕಿರುವುದಕ್ಕೆ ಒಂದು ಉದ್ದೇಶವಿತ್ತು. ಅವರ ಆರೈಕೆಯಲ್ಲಿ ಸಮಯ ಕಳೆದು ಹೋಗುತ್ತಿತ್ತು... ಈಗ ದಿನವೆಲ್ಲಾ ಏನು ಮಾಡಲೆಂದು ಅರ್ಥವಾಗುತ್ತಿಲ್ಲ. ಇಡೀ ದಿನ ಸುಮ್ಮನೆ ಕೂತಿರುತ್ತೇನೆ.'

ಕುಂಜಮ್ಮಾರೊಂದಿಗೆ ಚೆರಿಯಾಮ್ಮಾ ಕೂತಿರುವುದನ್ನು ನೋಡಿ ನನಗೆ ತುಂಬಾ